3. ಗಮನ ಸೆಳೆಯುವ ಸೂಚನೆಗಳು

(ಅ): ತಿರುಮಲದಲ್ಲಿರುವ ಕರ್ನಾಟಕ ರಾಜ್ಯ ಛತ್ರದಲ್ಲಿನ ಅವ್ಯವಸ್ಥೆ ಬಗ್ಗೆ

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಅಧ್ಯಕ್ಷರೇ, ತಿರುಮಲದಲ್ಲಿರುವ ಕರ್ನಾಟಕ ರಾಜ್ಯ ಛತ್ರದಲ್ಲಿನ ಅವ್ಯವಸ್ಥೆಗಳ ಬಗ್ಗೆ ಮಾನ್ಯ ಸಣ್ಣ ಉಳಿತಾಯ ಹಾಗೂ ಮುಜರಾಯಿ ರಾಜ್ಯಸಚಿವರ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಬಾಬುರಾವ್ ಚಿಂಚನಸೂರ್ (ಮಾನ್ಯ ಸಣ್ಣ ಉಳಿತಾಯ ಹಾಗೂ ಮುಜರಾಯಿ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಈ ಕೆಳಕಂಡ ಹೇಳಿಕೆಯನ್ನು ಮಾಡಲಿಚ್ಚಿಸುತ್ತೇನೆ.

ತಿರುಮಲದಲ್ಲಿ ಕರ್ನಾಟಕ ರಾಜ್ಯ ಛತ್ರವನ್ನು ಮೈಸೂರು ಸಂಸ್ಥಾನದ ಮಹಾರಾಜರು ಸುಮಾರು 300 ವರ್ಷಗಳ ಹಿಂದೆ ಸ್ಥಾಪಿಸಿದರು. ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಕೃಷ್ಣರಾಜೇಂದ್ರ ಛತ್ರವನ್ನು ನಿರ್ಮಿಸಲಾಗಿತ್ತು. ದೇವರ ಸೇವೆಗಾಗಿ ಕೆಲವು ಜಮೀನುಗಳನ್ನು ಹಿಂದಿನ ಬ್ರಿಟೀಷ್ ಸರ್ಕಾರವು ಮಹಾರಾಜರ ಮ್ಯಾನೇಜರ್ ರವರ ಹೆಸರಿಗೆ ದೇವದಾಯ ಇನಾಂ ಆಗಿ ನೀಡಿದೆ. ಆಲ್ಲದೆ 1931ನೇ ಇಸವಿಯಲ್ಲಿ ಮಹಾರಾಜರ ಪರವಾಗಿ ಅವರ ಮ್ಯಾನೇಜರ್ ರವರು 1 ಎಕರೆ 90 ಸೆಂಟ್ಸ್ ದೇವದಾಯ ಇನಾಂ ಜಮೀನನ್ನು ಖರೀದಿಸಿದ್ದಾರೆ. ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚುತ್ತಾ ಸದರಿ ಛತ್ರವು ಸಾಕಾಗದೆ ಕರ್ನಾಟಕ ಸರ್ಕಾರವು ಮತ್ತೆ 88 ಕೊಠಡಿಗಳುಳ್ಳ ಪ್ರವಾಸಿ ಸೌಧ 48 ಕೊಠಡಿಗಳುಳ್ಳ 17 ಕಾಟೇಜುಗಳು 24 ಕೊಠಡಿಗಳುಳ್ಳ ಕಲ್ಯಾಣ ಮಂಟಪ ಸಂಕೀರ್ಣ 8 ಕೊಠಡಿಗಳುಳ್ಳ ಅಥಿತಿ ಗೃಹ ಪರಿವೀಕ್ಷಣಾ ಮಂದಿರ ಮುಂತಾದ ಕಟ್ಟಡಗಳನ್ನು ನಿರ್ಮಿಸಿದೆ.

ಆದರೂ ಸಹ ಸ್ಥಳಾವಕಾಶದ ಕೊರತೆಯಿಂದಾಗಿ ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಇನ್ನೂ 105 ಕೊಠಡಿಗಳನ್ನು ನಿರ್ಮಿಸಲು ಕರ್ನಾಟಕ ಸರ್ಕಾರ ಮುಂದಾಗಿದೆ. ಆದರೆ ತಿರುಮಲ - ತಿರುಪತಿ ದೇವಸ್ಥಾನದವರು ಸದರಿ ಕಟ್ಟಡದ ನಕಾಶೆಗೆ ಮಂಜೂರಾತಿ ನೀಡಿಲ್ಲ. ಕಾರಣ, ತಿರುಮಲದಲ್ಲಿರುವ ಎಲ್ಲಾ ಜಮೀನುಗಳು ತಿರುಮಲ - ತಿರುಪತಿ ದೇವಸ್ಥಾನಕ್ಕೆ ಸೇರಿದೆ ಎಂದು ಆಂಧ್ರಪ್ರದೇಶ ಇನಾಂ ರದ್ದಿಯಾತಿ ಕಾಯ್ದೆ ಮತ್ತು ರೈತವಾರಿ ಪಟ್ಟ ಕಾಯ್ದೆಯ ಅನ್ವಯ ಈ ಎಲ್ಲಾ ಜಮೀನುಗಳು ತಿರುಮಲ - ತಿರುಪತಿ ದೇವಸ್ಥಾನಕ್ಕೆ ಸೇರಿ ಹೋಗಿದ್ದು, ಕಂದಾಯವನ್ನು ಸಹ ದೇವಸ್ಥಾನದವರೇ ಪಾವತಿಸುತ್ತಿರುವುದಾಗಿಯೂ ತಿಳಿಸಿದ್ದಾರೆ. ಈ ವಿಷಯದಲ್ಲಿ ನ್ಯಾಯಾಲಯದ ಮೊರೆ ಹೋದರೆ ವಿಳಂಬವಾಗುವುದೆಂಬ ಕಾರಣದಿಂದ, ಯಾತ್ರಾರ್ಥಿಗಳಿಗೆ ಜಾಗ್ರತೆ ಅಧಿಕ ಸ್ಥಳಾವಕಾಶ ದೊರಕಿಸಿಕೊಡುವ ಉದ್ದೇಶದಿಂದ ತಿರುಮಲ - ತಿರುಪತಿ ದೇವಸ್ಥಾನದವರು ಪ್ರಸ್ತಾಪಿಸಿದ್ದಂತೆ, ವಾರ್ಷಿಕ ಗುತ್ತಿಗೆ ಮೊತ್ತ ರೂ. 1,111-00 ರಂತೆ 50 ವರ್ಷಗಳ ಅವಧಿಗೆ 100 x 200 ವಿಸ್ತೀರ್ಣದ ಜಾಗವನ್ನು ಗುತ್ತಿಗೆ ಪಡೆಯಲು ಸರ್ಕಾರವು ಆದೇಶ ನೀಡಿತ್ತು. ಆದರೆ ತಿರುಮಲ - ತಿರುಪತಿ ದೇವಸ್ಥಾನದವರು ನಂತರ ಮಂಡಿಸಿದ ಗುತ್ತಿಗೆ ಕರಾರಿನಲ್ಲಿ ಜಮೀನನ್ನು ಉಪಗುತ್ತಿಗೆಗೆ ನೀಡಬಾರದು, ಅವರಿಗೆ ಬೇಕಾದಲ್ಲಿ ಯಾವುದೇ

ಜಮೀನನ್ನು ಅವರು ವಶಪಡಿಸಿಕೊಳ್ಳಬಹುದು ಮತ್ತು ಗುತ್ತಿಗೆ ಅವಧಿ ಮುಗಿದ ನಂತರ ಜಮೀನನ್ನು ಕಟ್ಟಡ ಸಮೇತ ಹಿಂದಿರುಗಿಸಬೇಕೆಂದು ಷರತ್ತುಗಳನ್ನು ವಿಧಿಸಿದ್ದಾರೆ. ಈ ಷರತ್ತುಗಳಿಂದ ರಾಜ್ಯ ಛತ್ರವು ಜಮೀನಿನ ಮೇಲಿದ್ದ ತನ್ನ ಹಕ್ಕುಗಳನ್ನು ಸಂಪೂರ್ಣವಾಗಿ ಕಳೆದುಕೊಂಡು ನೂರಾರು ವರ್ಷಗಳಿಂದ ಅನುಭವಿಸಿಕೊಂಡು ಬಂದಿದ್ದ ವಿಶೇಷ ಹಕ್ಕು ಮತ್ತು ಸವಲತ್ತುಗಳನ್ನು ಕಳೆದುಕೊಳ್ಳುವುದರಿಂದ ಸರ್ಕಾರವು ಹಿಂದೆ ಗುತ್ತಿಗೆ ಪ್ರಸ್ತಾವನೆಗೆ ನೀಡಿದ್ದ ಅನುಮತಿಯನ್ನು ದಿನಾಂಕ: 3-11-2000 ರಂದು ಹೊರಡಿಸಲಾದ ಸರ್ಕಾರಿ ಆದೇಶದ ಮುಖಾಂತರ ಹಿಂತೆಗೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ತಿರುಮಲ - ತಿರುಪತಿ ದೇವಸ್ಥಾನದವರು ರಾಜ್ಯ ಛತ್ರದಲ್ಲಿ ನಡೆಸಬೇಕಾದ ದುರಸ್ಥಿ ಕಾಮಗಾರಿಗಳಿಗೆ ಅವಕಾಶ ನೀಡುತ್ತಿಲ್ಲ.

ಸರ್ಕಾರವು ಈಗಾಗಲೇ ರೂ. 50.00 ಲಕ್ಷಗಳನ್ನು ರಾಜ್ಯ ಛತ್ರದ ದುರಸ್ಥಿ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಮಂಜೂರು ಮಾಡಿದೆ. ಹಿಂದೆಯು ಸಹ ರೂ. 5.00 ಲಕ್ಷಗಳನ್ನು ರಾಜ್ಯ ಛತ್ರದ ಆವರಣದಲ್ಲಿರುವ ರಸ್ತೆಗಳಿಗೆ ಡಾಂಬರು ಹಾಕಲು ಮಂಜೂರು ಮಾಡಲಾಗಿದೆ. ಆದರೆ ಈ ಹಣವನ್ನು ಉಪಯೋಗಿಸಿ ಛತ್ರದ ಕಟ್ಟಡಗಳನ್ನು ಅಭಿವೃದ್ಧಿಪಡಿಸಲು ತಿರುಮಲ - ತಿರುಪತಿ ದೇವಸ್ಥಾನದವರು ಅವಕಾಶ ನೀಡುತ್ತಿಲ್ಲ. ಇದರಿಂದಾಗಿ ಕಟ್ಟಡಗಳು ದುರವಸ್ಥೆಯಲ್ಲಿದ್ದು ಯಾತ್ರಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಆ ಸಂದಿಗ್ಧ ಪರಿಸ್ಥಿತಿಯಿಂದ ನಿವಾರಣೆ ಹೊಂದಲು ಸಕ್ಷಮ ಪ್ರಾಧಿಕಾರದ ಮುಂದೆ ತಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳಲು ಅರ್ಜಿಯನ್ನು ಸಲ್ಲಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ತಿರುಮಲ ಬೆಟ್ಟದಲ್ಲಿ ನೀರಿನ ಕೊರತೆ ಇದೆ. ರಾಜ್ಯ ಛತ್ರಕ್ಕೂ ನೀರಿನ ಬವಣೆ ತಟ್ಟಿದೆ. ಇದರಿಂದ ಛತ್ರವನ್ನು ಶುಭ್ರವಾಗಿ ಇಟ್ಟುಕೊಳ್ಳುವುದು ತೊಂದರೆಯಾಗಿದೆ. ಈಗಿರುವ ಒಂದು ಬೋರ್‌ವೆಲ್ ಸಾಕಾಗುತ್ತಿಲ್ಲ. ಹೆಚ್ಚಿನ ಕೊಳವೆ ಬಾವಿಗಳನ್ನು ಕೊರೆಯಲು ಸಹ ಟಿ.ಟಿ.ಡಿ. ಯವರು ಅವಕಾಶ ನೀಡುತ್ತಿಲ್ಲ.

ಮೇಲ್ಕಂಡ ಕಾರಣಗಳಿಂದ ಕರ್ನಾಟಕ ರಾಜ್ಯ ಛತ್ರವನ್ನು ಸ್ವಚ್ಛವಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ತಿರುಮಲ - ತಿರುಪತಿ ದೇವಸ್ಥಾನದವರ ಸಹಕಾರವಿಲ್ಲದೆ ತಿರುಮಲ ಬೆಟ್ಟದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯವನ್ನು ಮಾಡಲು ಸಾಧ್ಯವಾಗುತ್ತಿಲ್ಲ. ಆದುದರಿಂದ, ಉನ್ನತ ಮಟ್ಟದಲ್ಲಿ ಚರ್ಚಿಸಿ ಅನೇಕ ವರ್ಷಗಳಿಂದ ರಾಜ್ಯ ಛತ್ರಕ್ಕೂ ತಿರುಮಲ - ತಿರುಪತಿ ದೇವಸ್ಥಾನಕ್ಕೂ ಇದ್ದ ಸೌಹಾರ್ದಯುತ ಸಂಬಂಧವನ್ನು ಯಾತ್ರಾರ್ಥಿಗಳ ಹಿತದೃಷ್ಟಿಯಿಂದ ಮುಂದುವರಿಸುವಂತೆ ಸನ್ಮಾನ್ಯ ಮುಖ್ಯ ಮಂತ್ರಿಗಳಿಂದ ಆಂಧ್ರ ಪ್ರದೇಶದ ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆಯಲಾಗಿದೆ.

ಕರ್ನಾಟಕ ರಾಜ್ಯ ಛತ್ರದ ಆವರಣದಲ್ಲಿರುವ ಕಟ್ಟಡಗಳ ದುರಸ್ಥಿಗಾಗಿ ರೂ. 51.70 ಲಕ್ಷದ ಅಂದಾಜುಪಟ್ಟಿ ಸಿದ್ಧಪಡಿಸಲಾಗಿದೆ. ಈ ಕಾಮಗಾರಿಗಳಿಗಾಗಿ ಸರ್ಕಾರವು ರೂ. 50.00 ಲಕ್ಷ ಈಗಾಗಲೇ ಬಿಡುಗಡೆ ಮಾಡಿದೆ. ಆದರೆ ಕಾಮಗಾರಿಯನ್ನು ಕೈಗೊಳ್ಳಲು ಅನುಕೂಲವಾಗುವಂತೆ ಕಟ್ಟಡ ಸಾಮಗ್ರಿಗಳನ್ನು ತಿರುಮಲದ ಬೆಟ್ಟಕ್ಕೆ ಸಾಗಿಸಲು ಅನುಮತಿ ನೀಡುವಂತೆ ಕಾರ್ಯನಿರ್ವಾಹಕ ಅಧಿಕಾರಿ ಟಿ.ಟಿ.ಡಿ. ಅವರನ್ನು ದಿನಾಂಕ: 12-1-2001 ರಲ್ಲಿ ಕೋರಲಾಗಿದ್ದು, ಈವರೆಗೆ ಅವರಿಂದ ಅನುಮತಿ ಬಂದಿರುವುದಿಲ್ಲ.

ಕರ್ನಾಟಕ ರಾಜ್ಯ ಭತ್ರದ ಕಂತೀರ ಸಂಖ್ಯೆ 7 ರ ಪಕ್ಕದಲ್ಲಿ ಟಿ.ಟಿ.ಡಿ. ಪ್ರಾಧಿಕಾರದವರು ಶೌಚಾಲಯ ನಿರ್ಮಿಸಿರುತ್ತಾರೆ. ಈ ಶೌಚಾಲಯವನ್ನು ನಿರ್ಮಿಸಕೂಡದೆಂದು ಹಲವಾರು ಭಾರಿ ಟಿ.ಟಿ.ಡಿ. ಪ್ರಾಧಿಕಾರದವರಿಗೆ ಮನವಿ ಮಾಡಲಾಗಿತ್ತು. ನಂತರ, ಕಂದಾಯ ಕಾರ್ಯದರ್ಶಿಗಳು ಟಿ.ಟಿ.ಡಿ. ಅಧಿಕಾರಿಗಳೊಂದಿಗೆ ಈ ವಿಷಯದಲ್ಲಿ ಸಮಾಲೋಚಿಸಿದ ನಂತರ ಸಧ್ಯಕ್ಕೆ ಸದರಿ ಶೌಚಾಲಯವನ್ನು ಉಪಯೋಗಿಸದಂತೆ ತಡೆ ಮಾಡಲಾಗಿದೆ.

ಕರ್ನಾಟಕ ರಾಜ್ಯ ಭತ್ರದ ಸಮಸ್ಯೆ ಬಗ್ಗೆ ಉನ್ನತ ಮಟ್ಟದ ಚರ್ಚೆಗಾಗಿ ಪ್ರಯತ್ನಿಸಲಾಗುತ್ತಿದ್ದು, ಈ ಬಗ್ಗೆ ಉತ್ತಮ ಫಲಿತಾಂಶ ನಿರೀಕ್ಷಿಸಲಾಗುತ್ತಿದೆ.

ಇದಲ್ಲದೆ ನಮ್ಮ ಪ್ರಿನ್ಸಿಪಾಲ್ ಸೆಕ್ರೆಟರಿಯವರನ್ನು ಎರಡು ಬಾರಿ ಹೈದರಾಬಾದ್‌ಗೆ ಕಳುಹಿಸಿ ಅಲ್ಲಿನ ಪ್ರಿನ್ಸಿಪಾಲ್ ಸೆಕ್ರೆಟರಿ ಜೊತೆ ಚರ್ಚೆ ಮಾಡಿ ಮೌಖಿಕವಾಗಿ ನಮಗೆ ಆದೇಶವನ್ನು ಕೊಟ್ಟಿದ್ದಾರೆ. ನಿಮಗೆ ಅನುಮತಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಪ್ರಾಧಿಕಾರದಿಂದ ನಮಗೆ ಬರವಣಿಗೆಯಲ್ಲಿ ಉತ್ತರ ಬಂದಿಲ್ಲ. ಪುನಃ ಈಗ ಅಸೆಂಬ್ಲಿ ಮುಗಿದ ನಂತರ ನಮ್ಮ ಮುಖ್ಯಮಂತ್ರಿಗಳು ಬರೆದಿರುವ ಲೆಟರ್ ಕಾಪಿಯನ್ನು ತೆಗೆದುಕೊಂಡು ಹೋಗಿ ಪುನಃ ಅಲ್ಲಿ ನಾನು ಮುಜರಾಯಿ ಮಂತ್ರಿಗಳನ್ನು ಮೀಟ್ ಮಾಡಿ ಮತ್ತೆ ಅಲ್ಲಿನ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ ಅಲ್ಲಿನ ಪ್ರಾಧಿಕಾರದವರನ್ನೂ ಮೀಟ್ ಮಾಡಿ ಮಾಡುತ್ತೇವೆ. ಇದರ ಬಗ್ಗೆ 50 ಲಕ್ಷ ರೂಪಾಯಿಗಳನ್ನು ಕಳೆದ ಅಧಿವೇಶನದಲ್ಲೇ ಮಾನ್ಯ ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದ್ದಾರೆ. ಮತ್ತು 5 ಲಕ್ಷ ರೂಪಾಯಿಗಳನ್ನು ಡಾಂಬರೀಕರಣಕ್ಕೂ ಸಹಾ ಮಂಜೂರಾತಿ ಮಾಡಿದ್ದಾರೆ. ಸಧ್ಯದಲ್ಲೇ ಅವರು ಮೌಖಿಕ ಆದೇಶವನ್ನು ನಮಗೆ ಕೊಟ್ಟಿದ್ದಾರೆ. ಆದರೆ ರೈಟಿಂಗ್‌ನಲ್ಲಿ ಉತ್ತರ ಸಿಕ್ಕಿಲ್ಲ. ಇದರ ಬಗ್ಗೆ ಸಾಧ್ಯವಾದಷ್ಟು ನಾನು ಶೀಘ್ರವಾಗಿ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ. ಈ ತೊಂದರೆಯನ್ನು ನಿವಾರಿಸುವ ಸಲುವಾಗಿ ಹಿರಿಯ ಸದಸ್ಯರಾದ ಸುಬ್ಬಾರೆಡ್ಡಿಯವರನ್ನು ಸಲಹಾ ಸಮಿತಿಗೆ ನಾಮಿನೇಟ್ ಮಾಡಿದೆ. ಅವರೂ ಕೂಡ ಆ ಸಮಿತಿಯಲ್ಲಿದ್ದಾರೆ. ಅವರು ಕೂಡ ತಿರುಪತಿಯಲ್ಲಿ ಮೀಟಿಂಗ್‌ನ್ನು ಕರೆದು ಈ ಸಮಸ್ಯೆಯನ್ನು ಅವರು ಬಗೆಹರಿಸಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೇ, ಸಲಹಾ ಸಮಿತಿ ಎಂದು ಮಾಡಿ 40-50 ಜನರನ್ನು ಹಾಕಿದ್ದಾರೆ. ಅವರು ಒಂದು ಮೀಟಿಂಗನ್ನೂ ಕರೆದಿಲ್ಲ, ಏನು ಮಾಡಬೇಕೆಂದು ಗೊತ್ತಿಲ್ಲ. ಯಾತ್ರಿಕರಿಗೆ ನಿಜವಾಗಿಯೂ ಬಹಳ ತೊಂದರೆಯಾಗಿದೆ. ನಿಮ್ಮ ಕೈಯಲ್ಲಿ ಆಗದಿದ್ದರೆ ನಾವು ಮುಖ್ಯಮಂತ್ರಿಗಳ ಹತ್ತಿರ ಕೇಳಿಕೊಳ್ಳುತ್ತೇನೆ. ಯಾತ್ರಿಕರಿಗೆ ನರಕವಾಗಿದೆ. ಒಳಗಡೆ ಏನೂ ಪರಿಷ್ಷನ್ ಇಲ್ಲ, ಯಾವತ್ತೋ ಏನೋ ಅಲ್ಲಿ ಕಟ್ಟಿದ ಬೀಳುತ್ತದೆ. ಅಲ್ಲಿ ನೀರು ಇಲ್ಲ. ರೂಮುಗಳ ಅನುಕೂಲ ಇಲ್ಲ. ಅಲ್ಲಿ ಬೆಡ್‌ಸೀಟ್‌ಗಳು ಕೂಡ ಇಲ್ಲ. ದುಡ್ಡು ಮಾತ್ರ ವಸೂಲು ಮಾಡಿದ್ದಾರೆ. ಹಿಂದೆ ನಮ್ಮ ಸ್ನೇಹಿತರೊಬ್ಬರು ಏಕೆ ಸಲಹಾ ಸಮಿತಿಯೆಂದು ಮಾಡಿದ್ದಾರೆ? ಅದನ್ನು ಮಾಡಿ ಆರು ತಿಂಗಳಾಯಿತು. ಏನೂ ಇಲ್ಲ. ಒಂದು ಮೀಟಿಂಗನ್ನೂ ಮಾಡಿಲ್ಲ. ಈ ರೀತಿಯಾದರೆ ಸಲಹಾ ಸಮಿತಿ ಏತಕ್ಕೆ ಬೇಕು?

ಶ್ರೀ ಬಾಬುರಾವ್ ಚಿಂಚನಸೂರ್: ಮಾನ್ಯ ಅಧ್ಯಕ್ಷರೆ, ಈ ಅಧಿವೇಶನ ಮುಗಿದ ತಕ್ಷಣ ಆ ಸಭೆಯನ್ನು ಕರೆಯುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಇದುವರೆಗೆ ಸಲಹಾ ಸಮಿತಿಯ ಸಭೆಯನ್ನೇ ಕರೆದಿಲ್ಲ, ಅದರಲ್ಲೇನಿದೆ, ಅದರ ಅಧ್ಯಕ್ಷರು ಯಾರು? ಅದರ ಕೆಲಸಕಾರ್ಯಗಳೇನು ಎಂಬುದೇ ಗೊತ್ತಿಲ್ಲ.

ಅಧ್ಯಕ್ಷರು: ಅಧಿವೇಶನ ಮುಗಿದ ತಕ್ಷಣ ಸಭೆಯನ್ನು ಕರೆಯುವುದಾಗಿ ಹೇಳಿದ್ದಾರೆ. ಆಗ ತಮ್ಮ ಸಲಹೆಗಳು ಇದ್ದರೆ ಕೊಡಿ. ಅದು ಜಾರಿಗೆ ಬಾರದಿದ್ದರೆ ಅನಂತರ ಇಲ್ಲಿ ಮಾತನಾಡಿ.

ಶ್ರೀ ಬಾಬುರಾವ್ ಚಿಂಚನಸೂರ್: ಮಾನ್ಯ ಅಧ್ಯಕ್ಷರೆ, ನಮಗೂ ಇದರಲ್ಲಿ ಕಳಕಳಿ ಇದೆ. ನಾವು ಈಗಾಗಲೇ ಐವತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ, ರಸ್ತೆಯ ಸಲುವಾಗಿ ಏಳು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಆದರೆ ಹಿಂದೆ ಇದ್ದ ಮುಜರಾಯಿ ಸಚಿವರು ಇದನ್ನು ಐವತ್ತು ವರ್ಷದವರೆಗೆ ಗುತ್ತಿಗೆ ಕೊಟ್ಟಿದ್ದು ಮಹಾ ತಪ್ಪು. ನಾವು ಮಾಡಿರುವ ಕೆಲಸಗಳ ಬಗ್ಗೆ ವಿರೋಧ ಪಕ್ಷದ ತಾವು ಮೆಚ್ಚಬೇಕು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ನಾವು ಮಾನ್ಯ ಮುಖ್ಯಮಂತ್ರಿಯವರಿಗೆ ರಿಕ್ವೇಸ್ಟ್ ಮಾಡಿಕೊಂಡರೂ ಏನು ಮಾಡಿಸಲು ಸಾಧ್ಯವಾಗಿಲ್ಲ. ಮಾನ್ಯ ಸಚಿವರು ಒಂದು ದಿವಸವೂ ಅಲ್ಲಿ ಹೋಗಿ ಇರುವುದಿಲ್ಲ. ನಾನು ಆ ಛತ್ರಕ್ಕೆ ಹೋಗಿ ಕೇಳಿದ್ದೇನೆ, ಅವರು ಎಲ್ಲಿ ಇರುತ್ತಾರೋ ಗೊತ್ತಿಲ್ಲ.

ಶ್ರೀ ಎಂ.ಎಸ್. ಆತ್ಮಾನಂದ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೇನು ಹೇಳಿದ್ದಾರೆ ಅದೇ ಅನುಭವ ನನಗೂ ಆಗಿದೆ. ಕಳೆದ ಮೂರು-ನಾಲ್ಕು ವರ್ಷಗಳಿಂದ ಯಾತ್ರಾರ್ಥಿಗಳಿಗೆ ಕನಿಷ್ಟ ಸೌಲಭ್ಯವೂ ದೊರಕದೆ ಬಹಳ ತೊಂದರೆಯಾಗಿದೆ. ನಾವು ಅಲ್ಲಿಗೆ ಹೋಗಿದ್ದಾಗ ಹಲವಾರು ಯಾತ್ರಾರ್ಥಿಗಳು ನಮಗೆ ಮನವಿಯನ್ನು ಸಹ ಮಾಡಿದರು. ಅಧಿಕಾರಿಗಳು ಸಹ ಮನವಿ ಮಾಡಿದ್ದಾರೆ. 12-1-2000 ದಂದು ಕೋರಲಾಗಿ ಮೌಖಿಕ ಆದೇಶವನ್ನು ನೀಡಲಾಗಿದೆಯೆಂದು ಹೇಳುತ್ತಾರೆ. ಆಂಧ್ರ ಮತ್ತು ನಮ್ಮ ರಾಜ್ಯದ ನಡುವೆ ಸಾಮರಸ್ಯವಿರಬೇಕು ಎನ್ನತಕ್ಕ ಹಿನ್ನೆಲೆಯಲ್ಲಿ ಮಂತ್ರಿಗಳು ಅಲ್ಲಿಗೆ ಹೋಗಿ ಮಾತನಾಡುವುದಾಗಿ ತಿಳಿಸಿರುತ್ತಾರೆ. ಆ ಕೆಲಸ ಶೀಘ್ರವಾಗಿ ಆಗಬೇಕು. ನೀರು, ವಿದ್ಯುತ್ ಈ ರೀತಿ ಕನಿಷ್ಟ ಸೌಲಭ್ಯವನ್ನು ಒದಗಿಸುವಲ್ಲಿ ವಿಫಲವಾಗಿರುವ ಸಂದರ್ಭದಲ್ಲಿ, ಆ ಗೆಸ್ಟ್ ಹೌಸ್‌ನಲ್ಲಿ ಖಾಯಂ ಆದ ವಿಶೇಷಾಧಿಕಾರಿಗಳು ಇಲ್ಲ. ಇದೂ ಸಹ ಒಂದು ಕಾರಣವಾಗಿದೆ. ನಮ್ಮ ರಾಜ್ಯದಿಂದ ಹೆಚ್ಚಿನ ಸಂಖ್ಯೆಯಲ್ಲಿ ಯಾತ್ರಾರ್ಥಿಗಳು ಹೋಗುವುದರಿಂದ ವ್ಯವಸ್ಥಿತವಾದ ಸೌಲಭ್ಯವನ್ನು ಒದಗಿಸುವಲ್ಲಿ ಸರ್ಕಾರ ತೀವ್ರ ಕ್ರಮ ತೆಗೆದುಕೊಳ್ಳಬೇಕು, ಸಚಿವರು ಅಲ್ಲಿಗೆ ಹೋಗಿ ಕುಳಿತು ಆ ಕೆಲಸವನ್ನು ಮಾಡಿಸಿಕೊಂಡೇ ಬರಬೇಕು.

ಅಧ್ಯಕ್ಷರು: ಮಾನ್ಯ ಸಚಿವರೆ, ಅಲ್ಲಿ ವಿಶೇಷಾಧಿಕಾರಿಗಳು ಇಲ್ಲವಂತೆ, ಬೇಗನೆ ಪೋಸ್ಟ್ ಮಾಡಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಅವರು ಇಲ್ಲೇ ಇದ್ದಾರೆ, ಅವರ ಕಛೇರಿಯಲ್ಲೇ ಇದ್ದಾರೆ, ಆದರೆ ತಿರುಪತಿಯಲ್ಲಿ ಯಾರೂ ಇಲ್ಲ.

ಶ್ರೀ ಬಾಬುರಾವ್ ಬೊಂಚನಸೂರ್: ಅಧಿವೇಶನ ಮುಗಿದ ತಕ್ಷಣ ಸಲಹಾ ಸಮಿತಿಯನ್ನು ಕರೆಯುತ್ತೇನೆ.

(ಆ): ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರಿಗೆ ಆಗಿರುವ ತೊಂದರೆಗಳ ಬಗ್ಗೆ.

ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ): ಮಾನ್ಯ ಅಧ್ಯಕ್ಷರೆ, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರಿಗೆ ಆಗಿರುವ ತೊಂದರೆಗಳ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿಧಾನಸಭಾ ಸದಸ್ಯರುಗಳಾದ ಶ್ರೀ ಜಗದೀಶ್ ಶೆಟ್ಟರ್, ಶ್ರೀ ಎಸ್.ಎ. ರವೀಂದ್ರನಾಥ್ ಮತ್ತು ಶ್ರೀ ಎಸ್. ಸುರೇಶ್ ಕುಮಾರ್ ಹಾಗೂ ಡಾ। ವೈ. ನಾಗಪ್ಪ ಮತ್ತು ವಿಶ್ವೇಶ್ವರ ಹೆಗಡೆ ಇವರುಗಳು ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂ: 39, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ(ನಿ) ದೊಡ್ಡಬಾತಿ ಇದರಲ್ಲಿನ ಕಾರ್ಮಿಕ ಸಮಸ್ಯೆ ಬಗ್ಗೆ ಈ ಕೆಳಕಂಡ ವಿಷಯ ಪ್ರಸ್ತಾಪಿಸಿರುತ್ತಾರೆ.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ದೊಡ್ಡಬಾತಿ ಇದರ ಆಡಳಿತ ವರ್ಗದವರ ಕಾರ್ಮಿಕ ವಿರೋಧಿ ನೀತಿಯಿಂದಾಗಿ 1992 ರಿಂದ 124 ಜನ ಕಾರ್ಮಿಕರಿಗೆ ಆಗಿರುವ ಅನ್ಯಾಯದ ಬಗ್ಗೆ ಉಭಯ ಸದನಗಳಲ್ಲಿ ಚರ್ಚೆಗಳಾಗಿ ಸಂಬಂಧಿಸಿದ ಸಕ್ಕರೆ ಖಾತೆ ಮಂತ್ರಿಗಳು ನೀಡಿದಂತಹ ಆಶ್ವಾಸನೆಗಳ ಆಧಾರದ ಮೇಲೆ (ದಿನಾಂಕ 14-5-98 ರಂದು 53 ಮಂದಿ ಕಾರ್ಮಿಕರ ಬಗ್ಗೆ ಆದಂತಹ ಒಪ್ಪಂದದ ಷರತ್ತಿನಂತೆ) ಕಾರ್ಮಿಕ ನ್ಯಾಯಾಲಯ ಹುಬ್ಬಳ್ಳಿಯಲ್ಲಿದ್ದ ಕೆಲಸ ನಿರಾಕರಣೆ ಸಂಬಂಧ ವ್ಯಾಜ್ಯಗಳನ್ನು ವಾಪಸ್ ಪಡೆದಿದ್ದರೂ ಸಹಾ ಒಪ್ಪಂದದಂತೆ ಸದರಿ ಕಾರ್ಮಿಕರಿಗೆ ಬಾಕಿ ವೇತನ ಹಾಗೂ ಇನ್ನಿತರೆ ಸೌಲಭ್ಯಗಳು ಇದುವರೆಗೂ ಸಿಗದೇ ತುಂಬಾ ತೊಂದರೆ ಆಗಿರುವ ಬಗ್ಗೆ ಮತ್ತು ಉಳಿದ 75 ಕಾರ್ಮಿಕರಿಗೂ ಆಶ್ವಾಸನೆಗಳ ಪ್ರಕಾರ ಶೀಘ್ರ ಹಾಗೂ ಪೂರ್ಣ ನ್ಯಾಯ ದೊರಕಬೇಕಾಗಿರುವ ಬಗ್ಗೆ ಮಾನ್ಯ ಸಹಕಾರಿ ಖಾತೆ ಸಚಿವರ ಗಮನ ಸೆಳೆಯಬಯಸುತ್ತೇನೆ.

ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಮರದಿ ನೀಡಲಾಗಿದೆ.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ದೊಡ್ಡಬಾತಿ ಇದರಲ್ಲಿ 124 ಮಂದಿ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿದ್ದು, ಇವರನ್ನು ಕಾರ್ಖಾನೆಯಲ್ಲಿ ಮರು ನೇಮಕ ಮಾಡಿಕೊಳ್ಳುವ ಬಗ್ಗೆ ಹಿಂದಿನಿಂದಲೂ ವಿವಾದವಿರುತ್ತದೆ. ಈ ವಿಷಯವು ಉಭಯ ಸದನಗಳಲ್ಲಿ ಚರ್ಚೆಯಾಗಿ ಇದಕ್ಕೆ ಪರಿಹಾರ ಕಂಡುಕೊಳ್ಳುವ ಸಲುವಾಗಿ, ಕಾರ್ಮಿಕ ನ್ಯಾಯಾಲಯದಲ್ಲಿ